245 (21) ಶ್ರೀ ಪಾಟೀಲ್ ಬಿ.ಆರ್ (ಮುಂಡರಗಿ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಡಂಬಳ ಗ್ರಾಮದ ಔಟ್-ಪೋಸ್ಟ್‌ನ್ನು ಪೋಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ (ನನ್ನ ಪತ್ರದ ಮೇಲೆ) ಹಿಂದಿನ ಮುಖ್ಯಮಂತ್ರಿಗಳು ಆದೇಶ ಮಾಡಿದ ಪ್ರಕಾರ ಇಲಾಖೆ ಆದೇಶ ಹೊರಡಿಸಲಾಗಿದೆಯೇ;

ಆ. ಆದೇಶ ಹೊರಡಿಸದಿದ್ದರೆ ಯಾವಾಗ ಆದೇಶ ಹೊರಡಿಸಲಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ. ಪರಿಶೀಲನೆಯಲ್ಲಿದೆ.

ಆ. ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

246 (22) ಶ್ರೀ ಪಾಟೀಲ್ ಬಿ.ಆರ್ (ಮುಂಡರಗಿ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಮುಂಡರಗಿ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಯಾವುವು ಹಾಗೂ ಅವುಗಳು ಎಷ್ಟು ಕಿಲೋ ಮೀಟರ್ ಇವೆ;

ಆ. ಅದರಲ್ಲಿ ಡಾಂಬರೀಕರಣ ಮತ್ತು ಖಡೀಕರಣ ರಸ್ತೆಗಳು ಯಾವುವು ಹಾಗೂ ಅವುಗಳು ಎಷ್ಟು ಕಿಲೋ ಮೀಟರ್ ಇವೆ (ರಸ್ತೆವಾರು ವಿವರ ನೀಡುವುದು);

ಇ. ರಸ್ತೆಗಳು ಗುಂಡಿ ಬಿದ್ದು ಹಾಳಾಗಿದ್ದು ಅದರ ರಿಪೇರಿಗಾಗಿ ಒಂದು ಕಿಲೋ ಮೀಟರ್‌ಗೆ ಎಷ್ಟು ಹಣ ಬಿಡುಗಡೆ ಆಗಿದೆ ಮತ್ತು ಖರ್ಚು ಮಾಡಿದ ಹಣದ ವಿವರಗಳೇನು;

ಈ. ಗದಗ ಜಿಲ್ಲೆಯ ಗದಗ, ರೋಣ, ನರಗುಂದ, ಶಿರಹಟ್ಟಿ ವಿಧಾನಸಭಾ ಕ್ಷೇತ್ರಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಎಷ್ಟು ಕಿಲೋ ಮೀಟರ್ ಇವೆ;

ಉ. ಅದರಲ್ಲಿ ಡಾಂಬರೀಕರಣ ಮತ್ತು ಖಡೀಕರಣ ರಸ್ತೆಗಳು ಎಷ್ಟು ಕಿಲೋ ಮೀಟರ್ ಇವೆ; (ವಿವರ ನೀಡುವುದು)?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ.ಆ. ಮುಂಡರಗಿ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಉದ್ದದ ವಿವರ ಹಾಗೂ ಡಾಂಬರೀಕರಣ ಮತ್ತು ಖಡೀಕರಣ ವಿವರ ಇಂತಿದೆ.

ಕ್ರ ಸಂ	ರಸ್ತೆಯ ವರ್ಗ	ಒಟ್ಟು ಉದ್ದ ಕಿಮೀ	ಡಾಂಬರೀ ಕರಣ ಉದ್ದ ಕಿಮೀ	ಖಡೀಕರಣ ಉದ್ದ ಕಿಮೀ
1	ರಾಜ್ಯ ಹೆದ್ದಾರಿ	86.61	86.61	–
2	ಜಿಲ್ಲಾ ಮುಖ್ಯ ರಸ್ತೆ	176.47	162.03	14.44

ಇ. ಮುಂಡರಗಿ ವಿಧಾನ ಸಭಾ ಕ್ಷೇತ್ರದಲ್ಲಿ ರಾಜ್ಯ ಹೆದ್ದಾರಿಯ ದುರಸ್ತಿ ಹಾಗೂ ಸುಧಾರಣೆಗೆ 3 ವರ್ಷದ ವರೆಗೆ ಅಂದರೆ 2005 ರಿಂದ 2008 ರವರೆಗೆ 86.61 ಕಿಮೀ ಗೆ 353.00 ಲಕ್ಷ ರೂ. ಹಣ ಬಿಡುಗಡೆಯಾಗಿದ್ದು ಕರ್ನಾಟಕ ರಾಜ್ಯ ರಸ್ತೆ ನಿಗಮ ನಿಯಮಿತ (ಕೆ.ಆರ್.ಡಿ.ಸಿ.ಎಲ್) ಮುಖಾಂತರ ಟೆಂಡರ್ ಆಧಾರದ ಮೇಲೆ ಕೆಲಸ ಪ್ರಗತಿಯಲ್ಲಿದೆ. ಈವರೆಗೆ ಖರ್ಚಾದ ಹಣ ರೂ.170.10 ಲಕ್ಷ. ಮುಂಡರಗಿ ವಿಧಾನ ಸಭಾ ಕ್ಷೇತ್ರದಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ದುರಸ್ತಿಗೆ ಪ್ರತಿ ಕಿಮೀ ಗೆ ರೂ.16265.50 ರಂತೆ ರೂ.28.50 ಲಕ್ಷ ಹಾಗೂ ರೂ.40.00 ಲಕ್ಷ ವಿಶೇಷ ಅನುದಾನ ಒಟ್ಟು ರೂ.68.50 ಲಕ್ಷ 2005–06ನೇ ಸಾಲಿಗೆ ಬಿಡುಗಡೆಯಾಗಿದ್ದು, ನಿರ್ವಹಣೆ ಕೆಲಸಗಳ ಕಾರ್ಯಕ್ರಮ ಪಟ್ಟಿಗೆ ಅನುಮೋದನೆ ದೊರೆತಿದ್ದು ಕೆಲಸ ಪ್ರಾರಂಭಿಸಿದೆ. ಈವರೆಗೆ ಯಾವುದೇ ಖರ್ಚು ಬಿಡುಗಡೆ ಮಾಡಿಲ್ಲ.

ಈ.ಉ. (ಈ) ಹಾಗೂ (ಉ) ಗದಗ ಜಿಲ್ಲೆಯ ಗದಗ ರೋಣ ನರಗುಂದ ಶಿರಹಟ್ಟಿ ವಿಧಾನ ಸಭಾ ಕ್ಷೇತ್ರಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಉದ್ದ ಡಾಂಬರೀಕರಣ ಹಾಗೂ ಖಡೀಕರಣ ವಿವರಗಳು ಇಂತಿವೆ.

ವಿಧಾನ ಸಭಾ ಕ್ಷೇತ್ರ	ರಸ್ತೆ ವರ್ಗ	ರಸ್ತೆ ಉದ್ದ ಕಿಮೀಗಳಲ್ಲಿ	ಡಾಂಬರೀಕರಣ ಉದ್ದ ಕಿಮೀ ಗಳಲ್ಲಿ	ಖಡೀಕರಣ ಉದ್ದ ಕಿಮೀಗಳಲ್ಲಿ
ಗದಗ–188	ರಾಜ್ಯ ಹೆದ್ದಾರಿ	58.77	58.77	–
	ಜಿಲ್ಲಾ ಮುಖ್ಯ ರಸ್ತೆ	120.90	120.90	–
ರೋಣ–	ರಾಜ್ಯ ಹೆದ್ದಾರಿ	165.83	165.83	–

189	ಜಿಲ್ಲಾ ಮುಖ್ಯ ರಸ್ತೆ	110.18	110.18	–
ನರಗುಂದ–190	ರಾಜ್ಯ ಹೆದ್ದಾರಿ	86.48	86.48	–
	ಜಿಲ್ಲಾ ಮುಖ್ಯ ರಸ್ತೆ	134.02	134.02	–
ಶಿರಹಟ್ಟಿ–186	ರಾಜ್ಯ ಹೆದ್ದಾರಿ	109.34	109.34	–
	ಜಿಲ್ಲಾ ಮುಖ್ಯ ರಸ್ತೆ	119.40	119.40	–

247 (171) ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ) ಎನ್.ಚೆಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕೆಎಸ್ಆರ್‌ಟಿಸಿ ಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಗ್ರಾಮೀಣ ಪ್ರದೇಶಗಳಿಗೆ ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಒದಗಿಸಿಕೊಟ್ಟಿರುತ್ತಾರೆ;

ಆ. ಸದರಿ ವ್ಯವಸ್ಥೆಯಿಂದ ಸಂಸ್ಥೆಗೆ ಉಂಟಾದ ಲಾಭ–ನಷ್ಟದ ವಿವರಗಳೇನು (2004–05 ಮತ್ತು 2005–06ನೇ ಸಾಲಿಗೆ ಅನ್ವಯವಾಗುವಂತೆ);

ಇ. ಇತ್ತೀಚೆಗೆ ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಕೆಲವು ಪ್ರದೇಶಗಳಿಗೆ ಸ್ಥಗಿತಗೊಳಿಸಿರುವುದು ನಿಜವೇ;

ಈ. ಹೌದಾದಲ್ಲಿ, ಕಾರಣಗಳೇನು;

ಉ. ಗ್ರಾಮೀಣ ಸಾರಿಗೆಯ ಉಪಯುಕ್ತತೆಯನ್ನು ಮನಗಂಡು ಆ ಸೌಲಭ್ಯವನ್ನು ಸೂಕ್ತ ರೀತಿಯಲ್ಲಿ ಜನರಿಗೆ ಒದಗಿಸಿಕೊಡಲು ಸರಕಾರ ಮುಂದಾಗುವರೆ?

ಎನ್.ಚೆಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು)

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 354 ಗ್ರಾಮಗಳಿವೆ. ಇವುಗಳ ಪೈಕಿ, 150 ಗ್ರಾಮಗಳು ರಾಷ್ಟ್ರೀಕೃತವಾದ ವಲಯದಲ್ಲಿದ್ದು, ಇನ್ನುಳಿದ 204 ಗ್ರಾಮಗಳು ರಾಷ್ಟ್ರೀಕೃತವಾಗದ ವಲಯದಲ್ಲಿವೆ. ಪ್ರಸ್ತುತ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಾಷ್ಟ್ರೀಕೃತ ವಲಯದಲ್ಲಿರುವ ಎಲ್ಲಾ ಗ್ರಾಮಗಳಿಗೂ ಹಾಗೂ ರಾಷ್ಟ್ರೀಕೃತವಾಗದ ವಲಯದಲ್ಲಿ ಬರುವ 112 ಗ್ರಾಮಗಳಿಗೆ ಸಾರಿಗೆಯ ಸೌಲಭ್ಯವನ್ನು ಕಲ್ಪಿಸಿದೆ.